# ಸರ್ಕಾರಿ ಶಾಲೆಗಳೂ, ಅಧಿಕಾರಿಗಳೂ..

ಆಳುವ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳಿಗೇ ಸರ್ಕಾರಿ ಶಾಲೆಗಳ ಮೇಲೆ ವಿಶ್ವಾಸ ಇಲ್ಲ ಎನ್ನುವ ಸ್ಥಿತಿ ನಿಜಕ್ಕೂ ಅತ್ಯಂತ ನಾಚಿಕೆಗೇಡಿನದ್ದು.

ಸರ್ಕಾರಿ ಶಾಲೆಗಳು ದಿನೇ ದಿನೇ ಸೊರಗುತ್ತಿವೆ; ಖಾಸಗಿ ಶಾಲೆಗಳು ಬಲಿಷ್ಠವಾಗುತ್ತಿವೆ. ಬಹುತೇಕ ನಗರ ಪ್ರದೇಶಗಳಲ್ಲಿ ಖಾಸಗಿ ಶಾಲೆಗಳದ್ದೇ ಪಾರುಪತ್ಯ. ಅವರು ಹೇಳಿದ್ದೇ ಫೀಸು, ಮಾಡಿದ್ದೇ ನಿಯಮ. ಈ ಶಾಲೆಗಳ ಜತೆಗೆ ಸ್ಪರ್ಧಿಸಲಾಗದೆ ಸರ್ಕಾರಿ ಶಾಲೆಗಳು ಏದುಸಿರು ಬಿಡುತ್ತಿವೆ. ಸರ್ಕಾರಿ ಶಾಲೆಗಳನ್ನು ಸ್ಪರ್ಧೆಗೆ ಸಜ್ಜುಗೊಳಿಸುವುದು ಹೇಗೆ? ಅಲ್ಲಿನ ಮೂಲಸೌಲಭ್ಯಗಳನ್ನು ಹೆಚ್ಚಿಸಿ, ಆಧುನೀಕರಣಗೊಳಿಸಬೇಕು ಎನ್ನುವುದು ಮೊದಲ ವಾದ. ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆಗಳ ಭೋದನಾ ವಿಭಾಗ ಹೆಚ್ಚು ಬಲಯುತವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಅತ್ಯುತ್ತಮ ಶಿಕ್ಷಕ–ಶಿಕ್ಷಕಿಯರಿದ್ದಾರೆ. ಕೆಲವು ಕಡೆ ರಾಜಕೀಯ ಹಸ್ತಕ್ಷೇಪದಿಂದ ಅವರಿಗೆ ಸೂಕ್ತ ಭೋದನಾ ವಾತಾವರಣ ಇರಲಿಕ್ಕಿಲ್ಲ. ಇನ್ನು ಕೆಲವೆಡೆ ಸರ್ಕಾರದ ಇತರ ಕೆಲಸಗಳ ಹೊರೆಯೂ ಇದ್ದಿರಬಹುದು. ಆದರೆ ತರಬೇತಿ ಮತ್ತು ಸೌಲಭ್ಯಗಳ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಯ ಶಿಕ್ಷಕರೇ ಹೆಚ್ಚು ಸಾಮರ್ಥ್ಯ ಉಳ್ಳವರು. ಸರ್ಕಾರಿ ಶಾಲೆಗಳಿಗೆ ಅತ್ಯುತ್ತಮ ಕಟ್ಟಡಗಳು, ಲ್ಯಾಬ್, ವಾಹನಗಳ ಸೌಲಭ್ಯಗಳ ಕೊರತೆ ಇರಬಹುದು. ಆದರೆ ಜ್ಞಾನಸಂಪತ್ತು ಯಾವತ್ತೂ ಕಡಿಮೆ ಆಗಿಲ್ಲ. ಎಷ್ಟೋ ಅತ್ಯುತ್ತಮ ಎನ್ನಬಹುದಾದ ಖಾಸಗಿ ಶಾಲೆಗಳಲ್ಲಿ ಉದ್ಯೋಗದ ಭದ್ರತೆಯೇ ಇಲ್ಲದಿರುವ ಸ್ಥಿತಿಯಲ್ಲಿ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರೇ ಹೆಚ್ಚು ಸುಖಿಗಳು.

ಇಷ್ಟೆಲ್ಲ ಇದ್ದೂ ಸರ್ಕಾರಿ ಶಾಲೆಗಳು ಏಕೆ ಸಾರ್ವಜನಿಕರನ್ನು ಆಕರ್ಷಿಸುತ್ತಿಲ್ಲ? ಈ ಪ್ರಶ್ನೆಗೆ ಉತ್ತರ ಹುಡುಕುವಾಗ ಹೊಳೆಯುವ ಬಹುಮುಖ್ಯ ಅಂಶವೆಂದರೆ ಸರ್ಕಾರಿ ಅಧಿಕಾರಿಗಳಿಗೇ ಸರ್ಕಾರಿ ಶಾಲೆಗಳ ಮೇಲೆ ವಿಶ್ವಾಸವಿಲ್ಲ ಎನ್ನುವುದು! ಯಾವ ಜಿಲ್ಲೆಗಾದರೂ ಹೋಗಿ ನೋಡಿ– ಅಲ್ಲಿಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಜಿಲ್ಲಾ ಪಂಚಾಯ್ತು ಸಿಇಓ ಮತ್ತಿತರ ಹಿರಿಯ ಅಧಿಕಾರಿಗಳೆಲ್ಲ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಿರುತ್ತಾರೆ. ಮೇಲಿನ ದರ್ಜೆಯ ಅಧಿಕಾರಿಗಳನ್ನು ಸದಾ ಅನುಸರಿಸುವ ಇತರ ಸರ್ಕಾರಿ ನೌಕರರೂ ತಮ್ಮ ಮಕ್ಕಳನ್ನು ಎಷ್ಟೇ ಕಷ್ಟವಾದರೂ ಖಾಸಗಿ ಶಾಲೆಗೆ ಕಳುಹಿಸುತ್ತಾರೆ.

ಅಲಹಾಬಾದ್ ಹೈಕೋರ್ಟ್ ಈ ಹಿಂದೆ ನೀಡಿದ ತೀರ್ಪೊಂದರಲ್ಲಿ ಈ ಅಂಶವನ್ನು ಗಮನಿಸಿ, 'ಸರ್ಕಾರಿ ಅಧಿಕಾರಿಗಳು, ನೌಕರರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಕ್ರಮ ಕೈಗೊಳ್ಳಿ' ಎಂದು ಸರ್ಕಾರಕ್ಕೆ ಸೂಚನೆ ನೀಡಿತ್ತು. ಈಗ ಕೇಂದ್ರ ಸರ್ಕಾರ ಪ್ರಾಯೋಜಿತ ಅಧ್ಯಯನ ತಂಡವೊಂದು ಇದೇ ಶಿಫಾರಸನ್ನು ಮಾಡಿದೆ. 'ಭಾರತೀಯ ಆಡಳಿತ ಸೇವೆ, ನಾಗರಿಕ ಸೇವೆಯ ಅಧಿಕಾರಿಗಳು ತಾವು ನಿಯೋಜನೆಗೊಂಡ ಸ್ಥಳದಲ್ಲೇ ಇರುವ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದರೆ, ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಣೆಯಾಗುತ್ತದೆ' ಎಂದು ನೀತಿ ಆಯೋಗದ ಪ್ರಾಯೋಜಕತ್ವದಲ್ಲಿ ಅಧ್ಯಯನ ನಡೆಸಿದ ಅಮೃತಸರದ ಗುರು ಅರ್ಜುನದೇವ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವರದಿ ಹೇಳಿದೆ. ಗ್ರಾಮೀಣ ಪಂಜಾಬ್‌ನ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಅಧ್ಯಯನಕ್ಕೆ ಈ ಸಮಿತಿಯನ್ನು ನೇಮಿಸಲಾಗಿದೆ.

ಇದು ಪಂಜಾಬ್ ಮಾತ್ರವಲ್ಲ, ಕರ್ನಾಟಕ ಸಹಿತ ಎಲ್ಲ ರಾಜ್ಯಗಳ ಸ್ಥಿತಿಯೂ ಹೌದು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಯೋಚನೆ, ಯೋಜನೆಗಳನ್ನು ಹಂಚಿಕೊಳ್ಳುವ ಅಧಿಕಾರಿಗಳೇ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುವುದು ಒಂದು ರೀತಿಯಲ್ಲಿ ಆತ್ಮವಂಚನೆಯೂ ಹೌದು. ಬದಲಾಗಿ ಡಿಸಿ, ಎಸ್ಪಿ, ಡಿವೈಎಸ್ಪಿ, ಸಿಇಓ, ಡಿಎಚ್‌ಓ, ಡಿಡಿಪಿಐ ಮುಂತಾದ ಅಧಿಕಾರಿಗಳು ತಮ್ಮ ಮಕ್ಕಳನ್ನೂ ಸರ್ಕಾರಿ ಶಾಲೆಗೆ ಸೇರಿಸಿದರೆ, ಆ ಶಾಲೆಗಳಲ್ಲಿ ಇರುವ ಕೊರತೆಗಳೆಲ್ಲ ಕೆಲವೇ ದಿನಗಳಲ್ಲಿ ಇಲ್ಲವಾಗುತ್ತವೆ. ಖಾಸಗಿ ಶಾಲೆಗಳಿಗಿಂತ ಹೆಚ್ಚಿನ ಸೌಲಭ್ಯಗಳು ಕ್ಷಣಮಾತ್ರದಲ್ಲಿ ದೊರಕುತ್ತವೆ. ಅಭಿವೃದ್ಧಿಗೆ ಸಂಬಂಧಿಸಿದ ಕಡತಗಳು ಮಿಂಚಿನ ವೇಗದಲ್ಲಿ ಸಂಚರಿಸುತ್ತವೆ. ಹಿರಿಯ ಅಧಿಕಾರಿಗಳ ಮಕ್ಕಳೇ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಾರೆಂದಾಗ ಇತರ ನೌಕರರೂ ಅವರನ್ನು ಹಿಂಬಾಲಿಸುತ್ತಾರೆ.

ಹೀಗೆ ಸರ್ಕಾರಿ ಶಾಲೆಗಳು ಅತ್ಯುತ್ತಮ ಶಾಲೆಗಳಾಗಿ ರೂಪುಗೊಂಡರೆ, ಬಳಿಕ ಸರ್ಕಾರಿ ಆಸ್ಪತ್ರೆಗಳನ್ನೂ ಹೀಗೆಯೇ ಸುಧಾರಿಸಬಹುದು. ಆಳುವ ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ತಮ್ಮ ಸರ್ಕಾರಿ ಸಂಸ್ಥೆಗಳ ಮೇಲೆಯೇ ವಿಶ್ವಾಸ ಇಲ್ಲ ಎನ್ನುವ ಸ್ಥಿತಿ ನಿಜಕ್ಕೂ ಅತ್ಯಂತ ನಾಚಿಕೆಗೇಡಿನದ್ದು. ಅಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವರೆ?

■ ಬಿ.ಎಂ.ಹನೀಫ್



ಈಶ್ವರ್